## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1262 (1395)** |
| ಸದಸ್ಯರ ಹೆಸರು | : | ಶ್ರೀ ಟಿ.ಡಿ ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸ | ಪ್ರಶ್ನೆಗಳು | ಉತ್ತರ |
|---|---|---|
| ಅ) | 01.04.2006ರ ನಂತರ ನೇಮಕಗೊಂಡ ಅನುದಾನಿತ ನೌಕರರಿಗೆ NPS ಇಲ್ಲ OPS ಕೂಡ ಇಲ್ಲವಾದ್ದರಿಂದ, ಸರ್ಕಾರ NPS ರದ್ದುಮಾಡಿ OPS ಜಾರಿ ಮಾಡುವ ಸಂದರ್ಭದಲ್ಲಿ ಅನುದಾನಿತ ನೌಕರರಿಗೆ ಕೂಡ ಯಥಾವತ್ತಾಗಿ ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ [ಎಸ್‌ಪಿಎಲ್] 04 ಪಿಇಟಿ 2002, ದಿನಾಂಕ : 31-03-2006 ರನ್ವಯ ದಿನಾಂಕ :01-04-2006 ರ ನಂತರ ನೇಮಕಗೊಂಡ ನೌಕರರಿಗೆ ದಿನಾಂಕ: 01-04-2006 ರಿಂದ ಅನ್ವಯಿಸುವಂತೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಸದರಿ ಆದೇಶದ ಕ್ರಮ ಸಂಖ್ಯೆ : 08 ರಲ್ಲಿ ಖಾಸಗಿ ಅನುದಾನಿತ ಸಿಬ್ಬಂದಿಗೂ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಆಯಾ ಆಡಳಿತ ಮಂಡಳಿಯು ನೇಮಕಾತಿ ಪ್ರಾಧಿಕಾರವಾಗಿದ್ದು, ಅದರಂತೆ, ನೂತನ ಪಿಂಚಣಿ ಯೋಜನೆಯಂತೆ ಆಯಾ ಆಡಳಿತ ಮಂಡಳಿಯ ವಂತಿಕೆಯನ್ನು ಆಯಾಯ ಆಡಳಿತ ಮಂಡಳಿಗಳೇ ಭರಿಸಬೇಕು.<br><br>ಅನುದಾನಿತ ಶಿಕ್ಷಣ ಸಿಬ್ಬಂದಿಗಳಿಗೆ NPS ರದ್ದುಪಡಿಸಿ OPS ಜಾರಿಗೊಳಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. |
| ಆ) | ಅನುದಾನಿತ ಕಾಲೇಜುಗಳಲ್ಲಿ 2015ರ ನಂತರ ನೇಮಕಾತಿ ಆಗಿಲ್ಲದ ಕಾರಣ ಉಪನ್ಯಾಸಕರು ಇಲ್ಲದೇ ಇರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ: ಇಪಿ 396 ಎಸ್‌ಇಎಸ್ 2021 ದಿನಾಂಕ:07-08-2024ರ ಆದೇಶದಲ್ಲಿ ದಿನಾಂಕ:01-01-2016 ರಿಂದ 31-12-2020ರವರೆಗೆ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಆನ್-ಲೈನ್ ಮೂಲಕವೇ ನಡೆಸುವಂತೆ ಆದೇಶಿಸಲಾಗಿದೆ. ಸದರಿ ಆದೇಶದಲ್ಲಿ ಹುದ್ದೆ ಭರ್ತಿಗೆ ಏಳು ಷರತ್ತುಗಳನ್ನು ವಿಧಿಸಲಾಗಿದೆ. ಅದರಂತೆ ಹುದ್ದೆ ಭರ್ತಿಗೆ ಕ್ರಮವಹಿಸಬೇಕಾಗಿರುತ್ತದೆ.<br><br>ಖಾಲಿ ಹುದ್ದೆಗಳ ಮಾಹಿತಿಗಳನ್ನು ಇಂದೀಕರಿಸಲು ಕಾಲಾವಕಾಶವನ್ನು ಕಾಲೇಜುಗಳಿಗೆ ನೀಡಲಾಗಿದೆ ಜೊತೆಗೆ ಇಂದೀಕರಿಸಿದ ಮಾಹಿತಿಯನ್ನು ಪರಿಶೀಲಿಸಲು ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. ಪ್ರಸ್ತುತ ಹುದ್ದೆಗಳ ಭರ್ತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕಾಗಿದ್ದು, ಸದರಿ ಅರ್ಜಿಯನ್ನು ಸಹ ತಂತ್ರಾಂಶದಲ್ಲಿ ಇಂದೀಕರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. |

--2

| | | |
|---|---|---|
| ಇ) | ನೇಮಕಾತಿ ಇಲ್ಲದ ಕಾರಣ ಅನುದಾನಿತ ಕಾಲೇಜುಗಳ ಉಪನ್ಯಾಸಕರನ್ನು ಸರ್ಕಾರಿ ಕಾಲೇಜುಗಳಿಗೆ ನಿಯೋಜನೆ ಮಾಡಲು ಸರ್ಕಾರದಿಂದ ಕೈಗೊಂಡ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ: ಇಪಿ 10 ಟಿಪಿಯು 2022 ದಿನಾಂಕ: 30-09-2023 ಹಾಗೂ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನಿಯಮ 2024ರ ನಿಯಮ 27(6)(ಎ) ಪ್ರಕಾರ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ನಿಯೋಜಿಸಲು ಅವಕಾಶ ಇರುವುದಿಲ್ಲ. |
| ಈ) | ಅನುದಾನಿತ ಕಾಲೇಜುಗಳಿಗೆ 3%ನಲ್ಲಿ ಸೇವೆಗೆ ಸೇರಿದ ನೌಕರರು ನಿವೃತ್ತಿ ನಂತರ ಅವರ ಹುದ್ದೆ ರದ್ದಾಗುವುದೆಂದು ತಿಳಿಸಿದ್ದು, ರದ್ದಾದರೆ ಆ ಕಾಲೇಜಿನ ಮುಂದಿನ ಭವಿಷ್ಯವೇನು. ಇದರ ಬಗ್ಗೆ ಸರ್ಕಾರದ ನಿಲುವೇನು; | ಸರ್ಕಾರದ ಆದೇಶ ಸಂಖ್ಯೆ: ಇಡಿ 19 ಟಿಪಿಯು 2004 ದಿನಾಂಕ:01-02-2006ರಲ್ಲಿ "ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ವಿಷಯ/ವಿಭಾಗಕ್ಕೆ ಶೇ. 3 ಅನುದಾನದ ಅಡಿಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ವೇತನಾನುದಾನವನ್ನು ಒಳಪಡಿಸುವ ಯೋಜನೆಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ ಮತ್ತು ದಿನಾಂಕ:28-10-1996ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 155 ಎಸ್ಒಹೆಚ್ 95ರ ಆದೇಶವನ್ನು ಈ ಮೂಲಕ ಹಿಂದಕ್ಕೆ ಪಡೆದು ರದ್ದುಪಡಿಸಲಾಗಿದೆ.<br><br>ಮುಂದುವರೆದು, ಸದರಿ ಆದೇಶದಲ್ಲಿ ಇನ್ನು ಮುಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಾಗಲೀ ಮತ್ತು ಪದವಿ ಪೂರ್ವ ನಿರ್ದೇಶನಾಲಯದಲ್ಲಾಗಲೀ ಯಾವುದೇ ಹೆಚ್ಚುವರಿ ಶಿಕ್ಷಕರ ನೇಮಕಾತಿಯನ್ನು ಸದರಿ ಆದೇಶದ ಅಡಿಯಲ್ಲಿ ಮಾಡಕೂಡದು; ಹಾಗೇನಾದರೂ ಈ ಆದೇಶದಡಿಯಲ್ಲಿ ನೇಮಕಾತಿ ಮಾಡಿದಲ್ಲಿ ಸಂಬಂಧಪಟ್ಟವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕ್ರಮ ವಹಿಸಲಾಗುವುದು. ಈ ಆದೇಶದಡಿಯಲ್ಲಿ ಮಂಜೂರಾದ ಯಾವುದೇ ಹುದ್ದೆ ಖಾಲಿಯಾದಲ್ಲಿ ಅದನ್ನು ಸಂಪೂರ್ಣವಾಗಿ ಶಾಶ್ವತ ಅನುದಾನರಹಿತವೆಂದು ಪರಿಗಣಿಸಿ, ಈ ಸಂಬಂಧ ತಗಲುವ ವೆಚ್ಚಗಳನ್ನು, ಸರ್ಕಾರಕ್ಕೆ ಯಾವುದೇ ವೆಚ್ಚ ಬಾರದಂತೆ, ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳೇ ಭರಿಸುವ ಷರತ್ತಿನೊಂದಿಗೆ ನೇಮಕಾತಿ ಮಾಡಿಕೊಳ್ಳತಕ್ಕದ್ದು" ಎಂದು ತಿಳಿಸಲಾಗಿದೆ.<br><br>ಈ ಮೇಲಿನ ಆದೇಶದ ಪ್ರಕಾರ ಶೇ.3ರ ಅನುದಾನದ ಹುದ್ದೆಯು ಶಾಶ್ವತ ಅನುದಾನರಹಿತ ಹುದ್ದೆಯಾಗುತ್ತದೆ. ಆದುದರಿಂದ ಸಂಬಂಧಿಸಿದ ಕಾಲೇಜಿನ ಆಡಳಿತ ಮಂಡಳಿಗಳು ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರಿಯಾಗಿರುವುದರಿಂದ, ಇಂತಹ ಹುದ್ದೆಗಳಿಗೆ ಸಿಬ್ಬಂದಿಗಳನ್ನು ಅನುದಾನರಹಿತವಾಗಿ ನೇಮಿಸಿಕೊಳ್ಳಲು ಅವಕಾಶವಿರುತ್ತದೆ. |

| | | |
|---|---|---|
| ಉ) | 2015ರ ನಂತರ ನೇಮಕಾತಿ ಮಾಡಿಕೊಳ್ಳಲು, ಸರ್ಕಾರ 2020ರವರೆಗೆ ಸೂಚಿಸಿದ್ದು, ಈ ನಿಬಂಧನೆಗಳನ್ನು ಸಡಿಲಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? | ನಿಬಂಧನೆಗಳನ್ನು ಸಡಿಲಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ:ಇಪಿ 88 ಎಸ್‌ಇಎಸ್ 2026

**(ಎಸ್. ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.